# <u>ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ</u>

## <u>ಸಿ.ಸಿ. 254/2023</u>

<u>ಸಾಕ್ಷಿದಾರರ ಹೇಳಿಕೆಃ</u>

| | | | |
|---|---|---|---|
| **ಹೆಸರು** | : | ರೇವಣಸಿದ್ದಪ್ಪ | ಚಾಸಾಃ **1** ಪ್ರಾಸಾಃ **1** |
| **ತಂದೆಯ ಹೆಸರು** | : | ಈರಪ್ಪ | |
| **ವಯಸ್ಸು** | : | **40** ವರ್ಷ | |
| **ವೃತ್ತಿ** | : | ವ್ಯವಸಾಯ | |
| **ವಾಸಸ್ಥಳ** | : | ಹಾಲಿವಾಣ ಗ್ರಾಮ | |

ದಿನಾಂಕಃ **18-11-2025** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದ:-</u>

ಆರೋಪಿ ಗೊತ್ತಿಲ್ಲ. ಮೃತ ಚಂದ್ರಪ್ಪ ನನ್ನ ತಮ್ಮ. ಈಗ್ಗೆ 1 ½ ವರ್ಷಗಳ ಹಿಂದೆ ರಸ್ತೆಯ ಅಪಘಾತದಲ್ಲಿ ಚಂದ್ರಪ್ಪ ರವರು ಗಾಯಗೊಂಡು ಮೃತ ಪಟ್ಟಿರುತ್ತಾರೆ. ಆದರೆ ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂಬ ವಿಚಾರ ನನಗೆ ಗೊತ್ತಿಲ್ಲ. ಪೊಲೀಸರಿಗೆ ನಾನು ಯಾವುದೇ ದೂರನ್ನು ಕೊಟ್ಟಿರುವುದಿಲ್ಲ.

ಪೊಲೀಸರ ಕೋರಿಕೆಯ ಮೇರೆಗೆ 3 ದಾಖಲೆಗಳಿಗೆ ಸಹಿಯನ್ನು ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಛಾಯಾಚಿತ್ರಗಳಲ್ಲಿ ತಾನು ಇರುವ ಬಗ್ಗೆ ನೋಡಿ ಗುರುತಿಸಿದ್ದು ಆದರೆ ಯಾವ ವಿಚಾರಕ್ಕೆ ತೆಗೆದಿದ್ದಾರೆ ಎಂಬ ವಿಚಾರ ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಸ್ಥಳ ಮಹಜರ್ ಮತ್ತು ಅಮಾನತ್ತು ಮಹಜರ್ ಕ್ರಮವನ್ನು, ಕಚ್ಚ ನಕಾಶೆಯನ್ನು ತಯಾರಿಸಿರುವುದಿಲ್ಲ.

ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು, ಸ್ಥಳ ಮಹಜರ್ ಅನ್ನು

ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು, ಕಚ್ಚ ನಕಾಶೆಯನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು, 6 ಛಾಯಾಚಿತ್ರಗಳನ್ನು ನಿಪಿ-4 ರಿಂದ 9 ಎಂದು, ಅಮಾನತ್ತು ಮಹಜರ್ ಅನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು, 2 ಛಾಯಾಚಿತ್ರಗಳನ್ನು ನಿಪಿ-11 ಮತ್ತು 12 ಎಂದು, ಸಾಕ್ಷಿಯು 5 ಛಾಯಾಚಿತ್ರಗಳಲ್ಲಿ ತನ್ನ ತಮ್ಮ ಮೃತ ಚಂದ್ರಪ್ಪನ ಶವವನ್ನು ನೋಡಿ ಗುರುತಿಸಿದ್ದು ಸದರಿ ಛಾಯಾಚಿತ್ರಗಳನ್ನು ನಿಪಿ-13 ರಿಂದ 17 ಎಂದು, ಸಿ ಡಿ ಯನ್ನು ನಿಪಿ-18 ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಮರುಹೇಳಿಕೆಯನ್ನು ಕೊಟ್ಟಿರುವುದಿಲ್ಲ.

ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

<u>ಪಾಟೀ ಸವಾಲು :- ಮಾನ್ಯ ಸ.ಸ.ಅ. ರವರಿಂದ:-</u>

ಆರೋಪಿಯು ತನಗೆ ಸೇರಿದ ಪ್ಯಾಷನ್ ಪ್ರೊ ಬೈಕ್ ನಂ.ಕೆಎ-17/ಇಎಂ-0801 ಬೈಕ್ ನ ಹಿಂಬದಿಯಲ್ಲಿ ನನ್ನ ತಮ್ಮ ಚಂದ್ರಪ್ಪನನ್ನು ಕೂರಿಸಿಕೊಂಡು ಹೊಳೆಮಾದಾಪುರದಿಂದ ಹಾಲಿವಾಣಕ್ಕರ ಕಡೆಗೆ ಬೈಕ್ ನಲ್ಲಿ ದಿಃ 06-07-2022 ರಂದು ಸಂಜೆ 05-00 ಗಂಟೆ ಸಮಯದಲ್ಲಿ ಹೋಗುತ್ತಿದ್ದಾಗ ನರಸಗೊಂಡನಹಳ್ಳಿ , ಎ ಕೆ ಕಾಲೋನಿ ಮಧ್ಯದ ರಸ್ತೆಯಲ್ಲಿ ಬೈಕ್ ಅನ್ನು ಅತೀವೇಗವಾಗಿ ಚಾಲನೆ ಮಾಡಿದ್ದರಿಂದ ರಸ್ತೆಯಲ್ಲಿ ಆಕಳು ಅಡ್ಡಬಂದಾಗ ಚಾಲಕನು ಆಕಳನ್ನು ತಪ್ಪಿಸುವ ಸಲುವಾಗಿ ಏಕಾ ಏಕೀ ಬೈಕಿಗೆ ಬ್ರೇಕ್ ಹಾಕಿದಾಗ ಬೈನ ಹಿಂಬದಿಯಲ್ಲಿ ಕುಳಿತ್ತಿದ್ದ ನನ್ನ ತಮ್ಮ ರಸ್ತೆಯಲ್ಲಿ ಬಿದಿದ್ದರಿಂದ ರಸ್ತೆಯಲ್ಲಿದ್ದ ಕಲ್ಲಿಗೆ ತಲೆ ಬಡಿದು ಗಾಯವಾಗಿರುತ್ತದೆ ಎಂದು ಮತ್ತು ಹೊನ್ನಾಳಿ ಸರ್ಕಾರಿ ಆಸ್ಪತ್ರೆಗೆ ಆಂಬುಲೆನ್ಸ್ ನಲ್ಲಿ ಕರೆದುಕೊಂಡು ಹೋಗಿರುತ್ತಾರೆ ಎಂದು ನಂತರ ವೈದ್ಯರ ಸಲಹೆ ಮೇರೆಗೆ ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಮತ್ತು ಆಸ್ಪತ್ರೆಯಲ್ಲಿ ವೈದ್ಯರು ಬ್ರೈನ್ ಡೆಡ್ ಆಗಿದೆ ಎಂದು ವಾಪಾಸ್ಸು ಹೊನ್ನಾಳಿ ಆಸ್ಪತ್ರೆಗೆ ಬರುತ್ತಿದ್ದಾಗ ದಿಃ 07-07-2022 ರಂದು ಬೆಳಗ್ಗೆ 09-00 ಗಂಟೆ ಸಮಯದದಲ್ಲಿ ಮಾರ್ಗ ಮಧ್ಯದಲ್ಲಿ ಮೃತ ಪಟ್ಟಿರುತ್ತಾರೆ ಎಂದು ಮತ್ತು ನನ್ನ ತಮ್ಮನ ಶವವನ್ನು ಹೊನ್ನಾಳಿ ಆಸ್ಪತ್ರೆಯಲ್ಲಿ ಇರುತ್ತದೆ ಎಂದು ಮತ್ತು ಆರೋಪಿಯು ಬೈಕ್ ಅನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿದ್ದರಿಂದ ಅಪಘಾತವಾಗಿರುತ್ತದೆ ಎಂದು ಪೊಲೀಸರಿಗೆ ನಿಪಿ-1 ರಂತೆ ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ದಿಃ 08-07-2022 ರಂದು ನಾನು ಸ್ಥಳ ತೋರಿಸಿದ ಮೇರೆಗೆ ಚಾಸಾ-4 ಮತ್ತು 5 ರವರ

ಸಮಕ್ಷಮ ಬೆಳಗ್ಗೆ 10-00 ರಿಂದ 11-00 ಗಂಟೆ ಸಮಯದಲ್ಲಿ ನಿಪಿ-2 ರಂತೆ ಸ್ಥಳ ಮಹಜರ್ ಕ್ರಮ ಜರುಗಿಸಿ, ನಿಪಿ-3 ರಂತೆ ಕಚ್ಚ ನಕಾಶೆಯನ್ನು ತಯಾರಿಸಿ, ನಿಪಿ-4 ರಿಂದ 9 ರಂತೆ ಛಾಯಾಚಿತ್ರಗಳನ್ನು ತೆಗೆದಿದ್ದಾರೆ ಎಂದರೆ ಸರಿಯಲ್ಲ.

ಅದೇ ದಿನ ಪೊಲೀಸರು ಹೊನ್ನಾಳಿ ಪೊಲೀಸ್ ಠಾಣೆಯ ಆವರಣದಲ್ಲಿ ನನ್ನ, ಚಾಸಾ-4 ಮತ್ತು 5 ರವರ ಪ್ಯಾಷನ್ ಸ್ಟ್ರೊ ಬೈಕ್ ನಂ.ಕೆಎ-17/ಇಎಂ-0801 ಬೈಕನ್ನು ಅಮಾನತ್ತು ಪಡಿಸಿಕೊಂಡು ಬೆಳಗ್ಗೆ 11-30 ರಿಂದ ಮದ್ಯಾಹ್ನ 12-30 ಗಂಟೆ ಸಮಯದಲ್ಲಿ ನಿಪಿ-10 ರಂತೆ ಅಮಾನತ್ತು ಕ್ರಮ ಜರುಗಿಸಿ ನಿಪಿ-11 ಮತ್ತು 12 ರಂತೆ ಛಾಯಾಚಿತ್ರಗಳನ್ನು ತೆಗೆದಿದ್ದಾರೆ ಎಂದರೆ ಸರಿಯಲ್ಲ.

ಸದರಿ ದಿನದಂದು ಚಾಸಾ-2 ಮತ್ತು 3 ರವರು ಇನ್ನೊಂದು ಮೋಟಾರ್ ಸೈಕಲ್ ನಲ್ಲಿ ಹೋಗಿದ್ದು ಮತ್ತು ಸದರಿಯವರು ಅಪಘಾತವನ್ನು ಕಣ್ಣಾರೆ ನೋಡಿರುತ್ತಾರೆ ಎಂದು ಮತ್ತು ಚಾಸಾ-2 ಮತ್ತು 3 ರವರು ತನ್ನ ತಮ್ಮನನ್ನು ಉಪಚರಿಸಿದಾಗ ತಲೆಗೆ ಪೆಟ್ಟಾಗಿರುತ್ತದೆ ಎಂದು ಪೊಲೀಸರಿಗೆ ನಿಪಿ-19 ರಂತೆ ಮರುಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಈಗ ಆರೋಪಿಯೊಂದಿಗೆ ರಾಜಿ ಮಾಡಿಕೊಂಡಿದ್ದೇನೆ ಆದ ಕಾರಣ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು :- ಆರೋಪಿತರ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.